ವಸತಿ ಗೃಹಗಳಿಗೆ ವಾಹನ ನಿಲ್ಲಿಸಲು ನಿರ್ಮಿಸಿರುವ ಶೆಡ್ಡುಗಳು ದುರಸ್ತಿ.

2424 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಲಾಲ್‌ಬಾಗ್-ಸಿದ್ದಾಪುರದಲ್ಲಿರುವ ಲೋಕೋಪಯೋಗಿ ಇಲಾಖೆಯ ವಸತಿಗೃಹಗಳಲ್ಲಿನ ವಾಹನ ನಿಲ್ಲಿಸಲು ನಿರ್ಮಿಸಿರುವ ಶೆಡ್ಡುಗಳು ದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೇ?

ಆ) ಹಾಗಿದ್ದಲ್ಲಿ ಸದರಿ ಶೆಡ್ಗಳನ್ನು ದುರಸ್ಥಿ ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ.

ಇ) ವಸತಿಗೃಹಗಳಲ್ಲಿ ಹಾಕಿರುವ ಮೆಶ್ಗಳು ಕಿತ್ತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಅವುಗಳನ್ನು ದುರಸ್ಥಿ ಮಾಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಕ್ರಮ ಕೈಗೊಳ್ಳಲಾಗತ್ತಿದೆ.

ಇ) ಬಂದಿದೆ.

ಈ) ಕ್ರಮ ಕೈಗೊಳ್ಳಲಾಗುವುದು.

ವಿದ್ಯುತ್ ಮಂಡಳಿಗೆ ಬರಬೇಕಾಗಿರುವ ಹಣ.

2381 - ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪುರಸಭೆಗಳಿಂದ ಕರ್ನಾಟಕ ವಿದ್ಯುತ್ ಮಂಡಳಿಗೆ ಬರಬೇಕಾಗಿರುವ ಹಣವೆಷ್ಟು? ಎಲ್ಲಾ ಪುರಸಭೆಗಳ ವಿವರಗಳನ್ನೊದಗಿಸುವುದು.

ಆ) ಈ ಹಣವನ್ನು ಕೊಡುವಲ್ಲಿ ಪುರಸಭೆಗಳು ಹಣ ಹೊಂದಿವೆಯೇ? ಈ ಹಣವನ್ನು ಮನ್ನಾ ಮಾಡುವ ಕಾರ್ಯಕ್ರಮ ವಿದೆಯೇ?

ಇ) ಈ ಬಾಕಿ ಹಣದಿಂದ ಹೊಸದಾಗಿ ರಸ್ತೆ ದೀಪ ಹಾಕಲು ಇಲಾಖೆಯವರು ಒಪ್ಪದೇ ಇರುವುದು ನಿಜವೇ?

ಶ್ರೀ. ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 1995ರ ಮಾರ್ಚ್ ಅಂತ್ಯಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ರಾಜ್ಯದ ವಿವಿಧ ಪುರಸಭೆಗಳಿಂದ ಬರಬೇಕಾಗಿದ್ದ ಒಟ್ಟು ಬಾಕಿ ಹಣದ ಮೊತ್ತ 474.92 ಲಕ್ಷ ರೂ.ಗಳು ಬಾಕಿ ಹೊಂದಿದ್ದ ಪುರಸಭೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ಪುರಸಭೆಗಳ ಆರ್ಥಿಕ ಸ್ಥಿತಿಗತಿ ಉತ್ತಮ ಇಲ್ಲದಿದ್ದರೂ ಸಹ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಎದುರಿಸುತ್ತಿರುವ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಯಲ್ಲಿ ಬಾಕಿ ಹಣವನ್ನು ಮನ್ನಾ ಮಾಡುವುದು ಸಾಧ್ಯವಿಲ್ಲ.

ಇ) ಕೇವಲ ಗ್ರಾಮ ಪಂಚಾಯ್ತಿ ಮತ್ತು ಟೌನ್ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಮಾತ್ರ ಹೆಚ್ಚುವರಿ ಬೀದಿ ದೀಪಗಳನ್ನು ಹಾಕುವ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ. ಪುರಸಭೆ, ನಗರ ಸಭೆ ಮತ್ತು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಹೆಚ್ಚುವರಿ ಬೀದಿ ದೀಪಗಳನ್ನು ಬಾಕಿ ಇದ್ದರೂ ಹಾಕಲಾಗುತ್ತಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಎಸ್. ಕೃಷ್ಣಪ್ಪನವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2381 ಕ್ಕೆ ಅನುಬಂಧ.

31-3-95ರ ಅಂತ್ಯದಲ್ಲಿದ್ದಂತೆ ರಾಜ್ಯದ ವಿವಿಧ ಪುರಸಭೆಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾಗಿದ್ದ ಬಾಕಿ ಹಣದ ವಿವರಗಳು

ಕ್ರಮ. ಸಂಖ್ಯೆ.	ಜಿಲ್ಲೆ/ಪುರಸಭೆ	ಬಾಕಿ ಹಣದ ಮೊತ್ತ ರೂ.ಗಳಲ್ಲಿ
ಬೆಂಗಳೂರು ಜಿಲ್ಲೆ		
1)	ಟಿ.ಎಂ.ಸಿ. ಚನ್ನಪಟ್ಟಣ	90,790
2)	-"- ಕನಕಪುರ	4,05,094
3)	-"- ಆನೇಕಲ್	6,45,564
4)	-"- ರಾಮನಗರಂ	5,42,469
5)	-"- ಯಲಹಂಕ	8,16,777
6)	-"- ಹೊಸಕೋಟೆ	3,24,454
7)	-"- ದೊಡ್ಡ ಬಳ್ಳಾಪುರ	7,16,863
8)	-"- ಮಾಗಡಿ	760
9)	-"- ದೇವನಹಳ್ಳಿ	60,571
ತುಮಕೂರು ಜಿಲ್ಲೆ		
1)	ಟಿ.ಎಂ.ಸಿ. ತಿಪಟೂರು	24,96,136
2)	-"- ಚಿಕ್ಕನಾಯ್ಕನಹಳ್ಳಿ	3,88,623
3)	-"- ಕುಣಿಗಲ್	74,593
4)	-"- ಮಧುಗಿರಿ	5,30,168
5)	-"- ಸಿರಾ	8,01,520
ಕೋಲಾರ ಜಿಲ್ಲೆ		
1)	-"- ಬಂಗಾರಪೇಟೆ	3,06,166
2)	-"- ಮಲೂರು	6,71,289
3)	-"- ಮುಳಬಾಗಿಲು	23,66,860
4)	-"- ಚಿಕ್ಕಬಳ್ಳಾಪುರ	30,58,545
5)	-"- ಗೌರಿಬಿದನೂರು	4,72,008
6)	-"- ಶಿಡ್ಲಘಟ್ಟ	2,72,142
7)	-"- ಚಿಂತಾಮಣಿ	6,31,813

ದಕ್ಷಿಣ ಕನ್ನಡ ಜಿಲ್ಲೆ	
1) -"- ಮುಲ್ಕಿ	1,25,636
2) -"- ಕಾರ್ಕಳ	4,71,579
3) -"- ಮೂಡಬಿದರೆ	2,05,727
4) -"- ಬ್ರಹ್ಮಾವರ	50
5) -"- ಕುಂದಾಪುರ	3,38,630
6) -"- ಬೈಂದೂರು	145
ಶಿವಮೊಗ್ಗ ಜಿಲ್ಲೆ	
1) ಟಿ.ಎಂ.ಸಿ. ಶಿಕಾರಿಪುರ	1,68,916
2) -"- ಸಾಗರ	98,168
ಚಿಕ್ಕಮಗಳೂರು ಜಿಲ್ಲೆ	
1) -"- ಕಡೂರು	78,085
2) -"- ತರಿಕೇರೆ	8,70,552
ಮೈಸೂರು ಜಿಲ್ಲೆ	
1) -"- ನಂಜನಗೂಡು	7,66,059
2) -"- ಬನ್ನೂರು	2,41,415
3) -"- ಕೊಳ್ಳೇಗಾಲ	5,56,875
4) -"- ಚಾಮರಾಜನಗರ	11,22,104
5) -"- ಗುಂಡ್ಲುಪೇಟೆ	1,95,163
6) -"- ಹುಣಸೂರು	19,32,230
ಮಂಡ್ಯ ಜಿಲ್ಲೆ	
1) -"- ಮದ್ದೂರು	1,06,497
2) -"- ಮಳವಳ್ಳಿ	9,93,120
3) -"- ಶ್ರೀರಂಗಪಟ್ಟಣ	5,44,511
4) -"- ಪಾಂಡವಪುರ	5,94,288
ಕೊಡಗು ಜಿಲ್ಲೆ	
1) -"- ಮಡಿಕೇರಿ	3,81,735
ಹಾಸನ ಜಿಲ್ಲೆ	
1) -"- ಸಕಲೇಶಪುರ	4,815
2) -"- ಚನ್ನರಾಯಪಟ್ಟಣ	9,56,015

ಧಾರವಾಡ ಜಿಲ್ಲೆ		
1)	-"- ಶಿಗ್ಗಾಂವ್	26,7,47
2)	-"- ಸವಣೂರು	6,22,429
3)	-"- ಕುಂದ್‌ಗೋಳ	1,33,953
4)	-"- ನರಗುಂದ	2,30,509
5)	-"- ನವಲಗುಂದ	38,837
6)	-"- ಅಣ್ಣಿಗೇರಿ	9,33,058
7)	-"- ಮುಂಡರಗಿ	53,484
8)	-"- ಗದಗ ಬೆಟಗೇರಿ	30,019
9)	-"- ಲಕ್ಷ್ಮೇಶ್ವರ	96,593
10)	ಟಿ.ಎಂ.ಸಿ ರೋಣ	16,48,025
11)	-"- ಗಜೇಂದ್ರ ಗಢ	2,43,640
12)	-"- ನರೇಗಲ್	6,35,849
13)	-"- ಮುಳಗಾಂವ್	8,78,609
14)	-"- ಹಾವೇರಿ	98,082
15)	-"- ಹಾನಗಲ್	1,34,572
16)	-"- ರಾಣೆಬೆನ್ನೂರು	3,55,571
ಉತ್ತರ ಕನ್ನಡ ಜಿಲ್ಲೆ		
1)	-"- ಸಿರಸಿ	4,14,580
2)	-"- ದಾಂಡೇಲಿ	4,07,638
3)	-"- ಹಳಿಯಾಳ	1,06,136
4)	-"- ಭಟ್ಕಳ	23,310
5)	-"- ಹೊನ್ನಾವರ	
ಚಿತ್ರದುರ್ಗ ಜಿಲ್ಲೆ		
1)	-"- ಹಿರಿಯೂರು	1,54,052
2)	-"- ಹರಿಹರ	72,36,028
ಬೆಳಗಾಂ ಜಿಲ್ಲೆ		
1)	-"- ಖಾನಪುರ	1,45,407
2)	-"- ಬೈಲಹೊಂಗಲ	7,884
3)	-"- ರಾಮದುರ್ಗ	98,767
4)	-"- ಚಿಕ್ಕೋಡಿ	85,285

5)	-"- ಸದಲಗಾ	3,96,444
6)	-"- ಕೊನ್ನೂರು	3,667
7)	-"- ರಾಯಭಾಗ	2,93,925
8)	-"- ಕುಡುಚಿ	15,056

ಬಿಜಾಪುರ ಜಿಲ್ಲೆ

1)	-"- ಬಸವನ ಬಾಗೇವಾಡಿ	1,25,191
2)	-"- ಸಿಂಧಗಿ	2,942
3)	-"- ಮುದ್ದೇಬಿಹಾಳ	17,24,438
4)	-"- ಗುಳೇದ ಗುಡ್ಡ	1,36,798
5)	-"- ಹುನಗುಂದ	5,66,284
6)	-"- ಕೆರೂರು	32, 982
7)	-"- ಇಳಕಲ್ಲು	16,547

ರಾಜ್ಯದಲ್ಲಿ ಕೊಳವೆ ಬಾವಿಗಳ ದುರಸ್ಥಿಗಾಗಿ ಪಂಚಾಯಿತಿಗಳಿಗೆ ಹಣ

2462-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕೊಳವೆಬಾವಿಗಳ ದುರಸ್ತಿಗೆ ಪ್ರತಿ ಗ್ರಾಮಪಂಚಾಯತಿಗಳಿಗೂ ವರ್ಷಕ್ಕೆ ಎಷ್ಟು ಹಣ ಒದಗಿಸಲಾಗುವುದು?

ಆ) ಕರ್ನಾಟಕ ರಾಜ್ಯಾದ್ಯಂತ ಕೆಟ್ಟಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು?

ಇ) ಅವುಗಳನ್ನು ದುರಸ್ತಿ ಮಾಡಿಸಲು ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಪ್ರತಿ ಕೈಪಂಪಿನ ಕೊಳವೆ ಬಾವಿಯ ದುರಸ್ತಿಗೆ ವರ್ಷಕ್ಕೆ 400-00 ರೂಪಾಯಿಗಳನ್ನು ನಿಗದಿಪಡಿಸಿದ್ದು ಅದರಂತೆ ಹಣ ಒದಗಿಸಲಾಗುತ್ತಿದೆ.

ಆ) 9395

ಇ) ಕೊಳವೆ ಬಾವಿಗಳು ಕೆಟ್ಟು ಹೋದ ಬಗ್ಗೆ ದೂರುಗಳು ಬಂದ ಕೂಡಲೇ ಇಲಾಖೆಯಲ್ಲಿ ದಾಖಲಿಸಿಕೊಂಡು ಸಂಚಾರಿ ಘಟಕದಿಂದ ದುರಸ್ತಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರತಿ ತಾಲ್ಲೂಕಿನಲ್ಲಿಯೂ ಕೊಳವೆಬಾವಿಗಳ ದುರಸ್ತಿಗೆ ಸಿಬ್ಬಂದಿ ವರ್ಗದಿಂದ ಕೂಡಿದ ಒಂದು ಸಂಚಾರಿ ಕಾರ್ಯಾಗಾರ ವ್ಯಾನ್ ಇದೆ.

ವಿದ್ಯುತ್ ಮಂಡಳಿಗೆ ಬರಬೇಕಾದ ಬಾಕಿ ಬಗ್ಗೆ ನ್ಯಾಯಾಲಯದಲ್ಲಿರುವ ಪ್ರಕರಣ ಕುರಿತು

2312-ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುತ್ ಮಂಡಳಿಗೆ 1992-93, 1993-94 ಹಾಗೂ 1994-95 ಸಾಲಿನಲ್ಲಿ ಮತ್ತು 1995-96ನೇ ಸಾಲಿನಲ್ಲಿ (ಜುಲೈ 95ರ ಅಂತ್ಯದವರೆಗೆ) ವಿವಿಧ ಗ್ರಾಹಕರುಗಳಿಂದ ಬರಬೇಕಾಗಿರುವ ಒಟ್ಟು ಮೊತ್ತ ಎಷ್ಟು?